Reg. No. | | | | | | | | | |

# BSCKAL 103/FNDKAL 103/HRDKAL 103

**Credit Based I Semester B.Sc./B.Sc.(FND)/B.A.(HRD)**
**Degree Examination, Nov./Dec. 2015**
**(2013-14 Batch and Onwards)**
**ಕನ್ನಡ ಭಾಷಾ ಪತ್ರಿಕೆ – I**

Time : 3 Hours Max. Marks : 80

**ಭಾಗ – 1 (ಕಾವ್ಯ)**

I. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾದ ಭಕ್ತಿಯ ಸ್ವರೂಪಗಳನ್ನು ವಿವರಿಸಿರಿ.

2) ಹರಿಶ್ಚಂದ್ರ ತನ್ನ ಪತ್ನಿ ಪುತ್ರರನ್ನು ಮಾರಾಟ ಮಾಡಿದ ಸನ್ನಿವೇಶವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×5=5)**

1) 'ಯೋಧ ಮತ್ತು ಹೆಂಗಸು' ಕಥನ ಕವನದಲ್ಲಿ ಮೂಡಿ ಬಂದ ಮಾನವೀಯ ಮೌಲ್ಯಗಳನ್ನು ವಿವರಿಸಿರಿ.

2) ಆಧುನಿಕ ಮಾನವನ ತಲ್ಲಣಗಳನ್ನು 'ಇಗೋ ಬಂದೆ' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿರಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಗೋಪಾಲಕೃಷ್ಣ ಅಡಿಗ

2) 'ಆಹ್ವಾನ'ದಲ್ಲಿ ನವಸಮಾಜ ನಿರ್ಮಾಣಕ್ಕೆ ಕರೆ

3) 'ಮುಟ್ಟಾಟ' ಕವಿತೆಯ ಆಶಯ.

II. ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ, ಮಹತ್ವವನ್ನು ವಿವೇಚಿಸಿರಿ : **(1×5=5)**

1) ಷಟ್ಚಕ್ರ ರಾಕೆಟ್ಟುಗಳ ಹಂತ ಹಂತಕ್ಕೆ
ಅಂಚೆ ತಲುಪೀತೇ ಸಹಸ್ರಾರಕೆ ?
ಹುತ್ತುಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು
ಪುರುಷೋತ್ತಮನ ಆ ಅಂಥ ರೂಪ–ರೇಖೆ ?

2) ಊರ ಸೀರೆಗೆ ಅಗಸ ತಡಬಡಿವಡದಂತೆ
   ಹೊನ್ನೆನ್ನದು
   ಹೆಣ್ಣೆನ್ನದು
   ಮಣ್ಣೆನ್ನದು
   ಎಂದು ಮರುಳಾದೆ
   ನಿಮ್ಮನರಿಯದ ಕಾರಣ
   ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ.

ಆ) ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ಉತ್ತಮರ ಮುಂದಾವ ಠಕ್ಕಿರ ಲಾಪುದು ?
2) ಇದಕೆ ಜೋಳದ ಪಾಳಿಯಿಲ್ಲ ನೋಡು.
3) ಹೊಸಯುಗದ ಹಣೆಬರಹ ಬರೆಯೋಣ ಬಾ.

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : **(5×1=5)**

1) ಬೇಂದ್ರೆಯವರ ನಂತರ ಕನ್ನಡ ಕಾವ್ಯಗಳಿಗೆ ಜಾನಪದ ಸೊಗಡನ್ನು ತುಂಬಿದವರು ಯಾರು ?
2) ಎಚ್. ಎಸ್. ಶಿವಪ್ರಕಾಶ್ ಯಾವ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ ?
3) ಸಬಿಹಾ ಭೂಮಿಗೌಡ ಮೂಲತಃ ಎಲ್ಲಿಯವರು ?
4) ಬಸವಣ್ಣ ಕೂಡಲಸಂಗಮೇಶ್ವರನ ಪೂಜೆಯಲ್ಲಿ ನಿರತನಾದುದು ಎಲ್ಲಿ ?
5) ಸು. ರಂ. ಎಕ್ಕುಂಡಿಯವರ ಪೂರ್ಣ ಹೆಸರೇನು ?

## ಭಾಗ - 2 (ಗದ್ಯ)

IV. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ವ್ಯವಸ್ಥೆಯಲ್ಲಿನ ಶೋಷಣೆಯನ್ನು 'ಬಂಧಮುಕ್ತಿ' ಕಥೆ ಅನಾವರಣಗೊಳಿಸಿದ ಬಗೆ ಹೇಗೆ ? ವಿವರಿಸಿರಿ.
2) 'ಬಂದನಾ ಹುಲಿರಾಯನು' ಪ್ರಬಂಧದಲ್ಲಿ ನಿರೂಪಿತವಾಗಿರುವ ಬೇಟೆಯ ಸ್ವಾರಸ್ಯವನ್ನು ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಸಾಮಾಜಿಕ ಸಾಮರಸ್ಯದ ಸಂದೇಶ 'ಒಂಟಿ ಬ್ಯಾರಿಯೂ ಅವಬೃತ ಉತ್ಸವವೂ' ಕತೆಯಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.
2) ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳ ಸಂಬಂಧದ ಹೊಸ ವಿನ್ಯಾಸವನ್ನು ಚರ್ಚಿಸಿರಿ.

ಇ) **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×5=5)

1) ಒಗ್ಗರಣೆ ಶೀನಪ್ಪ ಸಾಹುಕಾರನಾದುದು ಹೇಗೆಂದು ವಿವರಿಸಿರಿ.

2) ರಾಷ್ಟ್ರೀಯತೆಯ ಕುರಿತು ಲೇಖಕರ ನಿಲುವುಗಳೇನು ?

V. **ಒಂದಕ್ಕೆ** ಟಿಪ್ಪಣಿ ಬರೆಯಿರಿ : (1×5=5)

1) ಮನುಷ್ಯ ಹಾಗೂ ಪ್ರಾಣಿ ಸಂಬಂಧಗಳ ಕುರಿತು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ.

2) ಕನ್ನಡ ಭಾಷೆಯ ಅಭಿವೃದ್ಧಿಯ ಕುರಿತಂತೆ ಲೇಖಕರ ಅಭಿಪ್ರಾಯವನ್ನು ವಿವರಿಸಿರಿ.

3) ಆರೋಗ್ಯವಂತ ಸಮಾಜ ನಿರ್ಮಾಣಗೊಳ್ಳಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (1×4=4)

1) ಗರ್ನಾಲು ರಾಮಣ್ಣನನ್ನು ಯಾರಿಗೆ ಹೋಲಿಸಲಾಗಿದೆ ?

2) ಒಗ್ಗರಣೆ ಶೀನಪ್ಪನ ಹೆಂಡತಿಯ ಹೆಸರೇನು ?

3) ಕುವೆಂಪು ನೀಡಿದ ಮಹತ್ವದ ವೈಚಾರಿಕ ಸಂದೇಶವೊಂದನ್ನು ತಿಳಿಸಿ.

4) ಡಾ. ಕೆ. ವಿ. ನಾರಾಯಣ ಯಾವ ಪತ್ರಿಕೆಯಲ್ಲಿ ಭಾಷೆಯ ಕುರಿತು ಅಂಕಣ ಬರೆಯುತ್ತಿದ್ದರು ?

## ಭಾಗ - 3 (ಕ್ರಿಯಾತ್ಮಕ ಕನ್ನಡ)

VII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಪ್ರಬಂಧ ಎಂದರೇನು ? ಅದರ ಸಾಮಾನ್ಯ ಸ್ವರೂಪವನ್ನು ವಿವರಿಸಿರಿ.

2) ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಬೆಳೆದು ಬಂದ ಬಗೆಯನ್ನು ವಿವರಿಸಿರಿ.

VIII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×5=5)

1) ವಿಜ್ಞಾನವನ್ನು ಮಾನವೀಕರಣಗೊಳಿಸುವ ನಿಟ್ಟಿನಲ್ಲಿ ನಿಮ್ಮ ನಿಲುವುಗಳೇನು ?

2) ಪರಿಸರ ನಾಶವನ್ನು ತಡೆಗಟ್ಟುವ ಬಗ್ಗೆ ಒಂದು ಪ್ರಬಂಧ ಬರೆಯಿರಿ.

IX. ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಶಿವರಾಮ ಕಾರಂತರು ತಂದ ವಿಜ್ಞಾನ ವಿಶ್ವಕೋಶ ಯಾವುದು ?

2) ಪ್ರಬಂಧವನ್ನು 'ಎಸ್ಸೆಯ್' ಎಂದು ಹೇಳಿದ ಫ್ರೆಂಚ್ ಬರಹಗಾರ ಯಾರು ?

---